ಸಿ.ಸಿ ನಂಬ್ರ: 942/2023
ಡಿ.ಡಬ್ಲ್ಯೂ : 1

ದಿನಾಂಕಃ 23-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಮುಂದುವರಿದ ಪಾಟೀ ಸವಾಲು: ಆರೋಪಿ ಪರ ಶ್ರೀ ಟಿ ಬಿ ಎಸ್ ವಕೀಲರಿಂದ

**1.** ನಾನು ಕಳೆದ ಬಾರಿ ಪಾಟೀ ಸವಾಲಿನಲ್ಲಿ ಆಧಾರ್ ಕಾರ್ಡ್ ಹೊಸದಾಗಿ ತೆಗೆದುಕೊಂಡಿರುತ್ತೇನೆ ಎಂದು ಹೇಳಿದ್ದು ಅದನ್ನು ತಂದಿರುವುದಿಲ್ಲ. ಆಧಾರ್ ಕಾರ್ಡ್ ಇರುತ್ತದೆ. ಅದನ್ನು ನಾನು ಹಾಜರು ಪಡಿಸುತ್ತೇನೆ. ನನ್ನ ಹೆಂಡತಿಯ ಆಧಾರ್ ಕಾರ್ಡ್ ಕಳೆದುಹೋಗಿದೆ ಎಂದು ಹೇಳಿದ್ದು ಮೂಲ ಪ್ರತಿಯೇ ಇರುತ್ತದೆ, ಅದರ ಇನ್ನೊಂದು ಪ್ರತಿಯನ್ನು ಯಾವಾಗ ಡೌನ್ ಲೋಡ್ ಮಾಡಿಕೊಂಡಿರುತ್ತೇನೆ ಎಂದು ನೆನಪಿರುವುದಿಲ್ಲ. ನನ್ನ ಮಗನ ಆಧಾರ್ ಕಾರ್ಡ್ ಕಳೆದುಹೋಗಿದೆ ಎಂದು ಪೊಲೀಸರಿಗೆ ಹೇಳಿರುವುದಿಲ್ಲ. ನನ್ನ ಮಗನ ಆಧಾರ್ ಕಾರ್ಡ್ ಕಳೆದುಹೋಗಿರುವುದಿಲ್ಲ.

2. ನಾನು ಕೋಟ ಠಾಣೆಯಲ್ಲಿ ಮುಖ್ಯ ಪೇದೆಯ ಬಳಿ ದೂರು ಕೊಟ್ಟಿರುತ್ತೇನೆ. ಅವರು ನನಗೆ ಒಂದು ನಿ.ಡಿ. 3 ರಂತೆ ಕೊಟ್ಟಿರುವ ಹಿಂಬರಹವನ್ನು ಓದಿ ನೋಡಿರುತ್ತೇನೆ. ನನಗೆ ಹಿಂಬರಹ ಕೊಟ್ಟ ಸಮಯದಲ್ಲಿ ಓದಿ ನೋಡಿರುತ್ತೇನೆ. ಸದರಿ ಹಿಂಬರಹದಲ್ಲಿ ಪೊಲೀಸರು ಪತ್ನಿ ಹಾಗೂ ಮಗನ ಆಧಾರ್ ಕಾರ್ಡ್ ಕಳೆದುಹೋಗಿರುತ್ತದೆ ಅಂತ ನಮೂದಿಸಿಕೊಟ್ಟಿದ್ದು ಅದು ಸರಿ ಇರುವುದಿಲ್ಲ. ನನ್ನ ಹೆಂಡತಿಯ ಆಧಾರ್ ಕಾರ್ಡ್ ಹಾಗೂ ಮಗನ ಜನನ ಪ್ರಮಾಣ ಪತ್ರ ಕಳೆದುಹೋಗಿರುತ್ತದೆ ಎಂದು ದೂರು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

3. ನಿ.ಡಿ. 2 ಪೊಲೀಸರನ್ನು ಒಳಗೆ ಹಾಕಿಕೊಂಡು ಕೊಟ್ಟ ದಾಖಲೆ ಎಂದರೆ ಸರಿಯಲ್ಲ. ಬ್ಯಾಂಕಿನವರಿಗೆ ಕೊಟ್ಟ ದಾಖಲೆಯನ್ನು ನಾನು ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದೂರುದಾರ ನೋಟಿಸು ಕೊಟ್ಟಿದ್ದಕ್ಕೆ ಸಂಬಂಧಪಟ್ಟಂತೆ ನಾನು ಉತ್ತರ ಕೊಟ್ಟಿರುತ್ತೇನೆ. ಉತ್ತರ ತಿಳುವಳಿ ನೋಟಿಸನಲ್ಲಿ ಬರೆದಿರುವ ವಿಚಾರ ಸತ್ಯವಾಗಿರುತ್ತದೆ. ಆ ಉತ್ತರ ತಿಳುವಳಿ ಪತ್ರಿಕೆಯಲ್ಲಿ ನಾನು ಹೇಳಿದಂತೆ ಇರುತ್ತದೆ. ನೋಟಿಸು ಕೊಟ್ಟ ನಂತರವೇ ಆ ಚೆಕ್ ಕಳೆದುಹೋಗಿವೆ ಎಂದು ಗೊತ್ತಾಗಿರುತ್ತದೆ ಎಂದು ನಾನು ಉತ್ತರ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಆ ಚೆಕ್ ಗಳು ಅವರಿಗೆ ಸಿಕ್ಕಿರುತ್ತವೆ ಎಂದು ನನಗೆ ಗೊತ್ತಾಗಿರುತ್ತದೆ ಎಂದು ಉತ್ತರ ತಿಳುವಳಿಯಲ್ಲಿ ಬರೆಯಿಸಿರುತ್ತೇನೆ ಎಂದು ನುಡಿಯುತ್ತಾರೆ.

4. ನಾನು ವ್ಯವಹಾರದ ಅನುಕೂಲತೆಗಾಗಿ ಒಂದು ಚಿಕ್ಕ ಪಂಡ್ ಮಾಡಿರುತ್ತೇನೆ. ಆ ಪಂಡ್ ನ ಹಣ ಕೊಡುವ ವಿಚಾರದಲ್ಲಿ ಗಲಾಟೆ ಆಗಿರುತ್ತದೆ. ನಾನು ಪಂಡ್ ಮಾಡಿ ನೂರಾರು ಜನರಿಗೆ ಹಣ ಕೊಡಬೇಕಾಗಿದ್ದು, ಆ ನೂರಾರು ಜನರು ನನಗೆ ಚೆಕ್ ಕೊಡಿ ಎಂದು ಕೇಳಿದ್ದು ಸದರಿ ಚೆಕ್ ಡಿಸೋನರ್ ಆಗುತ್ತದೆ ಎಂದು ಗೊತ್ತಿದ್ದು, ಆ ಚೆಕ್ ನ್ನು ಕೊಟ್ಟ ಮೇಲೆ ನನ್ನ ಮೇಲೆ ಪ್ರಕರಣ ಆಗುತ್ತದೆ ಎಂದು ಗೊತ್ತಾಗಿ ಕಳೆದು ಹೋಗಿದೆ ಎಂದು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಾನು ಯಾವುದೇ ಜನರಿಗೆ ಹಣ ಕೊಡಬೇಕಿಲ್ಲ ನಾನು ಯಾರಿಗೂ ಚೆಕ್ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಪಿರ್ಯಾದಿಗೆ ಕೊಡಬೇಕಾದ ಹಣಕ್ಕೆ ಚೆಕ್ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ